# ಏಕಶಿಲಾ ಕಲ್ಲಿನ ಮರಿಗೆ

ಸಾಗರ ತಾಲ್ಲೂಕಿನ ಹಂದಿಗೋಡು ಎಂಬ ಊರಿನ ಮುಖ್ಯರಸ್ತೆಯ ಅಂಚಿನಲ್ಲಿ ಕರಿ ಕಲ್ಲಿನಲ್ಲಿ ನಿರ್ಮಿಸಿದ ಒಂದು ಏಕಶಿಲಾ ಕಲ್ಲಿನ ಮರಿಗೆಯಿದೆ. ಕೆಳದಿ ಅರಸರ ಆಳ್ವಿಕೆಯ ಕಾಲದ್ದೆಂದು ಗುರುತಿಸುವ ಈ ಕಲ್ಲು ಮರಿಗೆ ಹತ್ತಿರದಲ್ಲೇ ಒಂದು ಮಠವಿತ್ತಂತೆ. ಆ ಮಠದ ಪಶು ಸಂಪತ್ತಿನ ದಾಹ ತೀರಿಸಲು ಈ ಕಲ್ಲು ಮರಿಗೆ ನಿರ್ಮಾಣವಾಯಿತಂತೆ. ಮರಿಗೆಯ ಹೊರ ಗೋಡೆಯ ಮೇಲೆ ಕೆತ್ತಿರುವ ಬಸವಣ್ಣನ ಕುಸುರಿ ಕೆತ್ತನೆ ಆಕರ್ಷಣೀಯ. ಕಲ್ಲು ಮರಿಗೆಯ ಹೊರಭಾಗದಲ್ಲಿ ಹಳೆಗನ್ನಡದಲ್ಲಿ ಕೆತ್ತಿರುವ ಅಕ್ಷರ ಅದರ ಇತಿಹಾಸದ ಕುರಿತು ಮಾಹಿತಿ ನೀಡುತ್ತದೆ. ಪುರಾತನ ಈ ಕಲ್ಲು ಮರಿಗೆ ಇಂದು ವ್ಯವಸಾಯದ ಉಪಕರಣಗಳನ್ನು ಹರಿತಗೊಳಿಸುವ ಸಾಧನವಾಗಿ ಮಾರ್ಪಟ್ಟು ತನ್ನ ಮೊದಲಿನ ಆಕಾರ ಕಳೆದುಕೊಳ್ಳುತ್ತಿದೆ.

**–ಮೃತ್ಯುಂಜಯ ಎಚ್.ಎಸ್., ಬೆಂಗಳೂರು**





# ಶತಮಾನ ಕಂಡ ಭತ್ತದ ಪಣತ

ಅತ್ಯಂತ ಪುರಾತನವಾದ, ಶತಮಾನ ಕಂಡ ಭತ್ತದ ಪಣತವಿದು. ಕಪ್ಪು ಮರದಲ್ಲಿ ಚಚ್ಚೌಕಾರದಲ್ಲಿ ಸುಮಾರು 9 ಅಡಿ ಎತ್ತರಕ್ಕೆ ನಿರ್ಮಿಸಿರುವ ಈ ಪಣತವನ್ನು ಇಂದಿಗೂ ಭತ್ತ ತುಂಬಲು ಬಳಸುತ್ತಿದ್ದಾರೆ ಉತ್ತರ ಕನ್ನಡದ ಸಿದ್ದಾಪುರ ತಾಲ್ಲೂಕಿನ ದಾಸನಹುಡಿಲು ಗ್ರಾಮದ ನಾರಾಯಣ ವಿಘ್ನೇಶ್ವರ ಭಟ್ಟರು. ಅವರ ಅಜ್ಜನ ಕಾಲದಲ್ಲೇ ಜಗುಲಿಯ ಮೇಲೆ ಒಂದು ಅಂಕಣ (10X10 ಅಡಿ) ಜಾಗದಲ್ಲಿ ಈ ಪಣತ ನಿರ್ಮಿಸಲಾಗಿದೆ. ಸದ್ಯ ಭತ್ತವನ್ನು ಚೀಲಗಳಲ್ಲಿ ತುಂಬಿಸಿ ಸಂಗ್ರಹಿಸಿಟ್ಟು ಬೇಕಾದಾಗ ಅಕ್ಕಿ ಮಾಡಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ.

**–ಗೋಪಿ ಸಸಿತೋಟ, ದಾನಮಾವು**

# ತಾಂಬೂಲ ಪೆಟ್ಟಿಗೆ

ಮೊನ್ನೆ ನನ್ನ ಸ್ನೇಹಿತೆ ಮನೆಗೆ ಹೋಗಿದ್ದೆ. ಅಲ್ಲಿ ಅವರ ಮಗು ಸ್ವಲ್ಪ ದೊಡ್ಡದೆನಿಸಿದ ಸ್ಟೀಲ್ ಕಾರ್ ಹಿಡಿದು ಆಡುತ್ತಿತ್ತು. ಈಗಿನ ಪ್ಲಾಸ್ಟಿಕ್ ಯುಗದಲ್ಲಿ ಆ ಕಾರು ನನಗೆ ತುಂಬ ಆಕರ್ಷಕವಾಗಿ ಕಂಡಿತು. ಕುತೂಹಲದಿಂದ ವಿಚಾರಿಸಿದೆ. ಅದು ನನ್ನ ಸ್ನೇಹಿತೆಯ ತಾತನ ಕಾಲದ ತಾಂಬೂಲದ ಡಬ್ಬಿಯಂತೆ. ಅದರಲ್ಲಿ ತಳ ಭಾಗಕ್ಕೆ ಎಲೆ ಇಟ್ಟು, ಮೇಲಿರುವ ನಾಲ್ಕು ಪುಟ್ಟ ಪುಟ್ಟ ಬಟ್ಟಲುಗಳಲ್ಲಿ ಅಡಿಕೆ, ಕಡ್ಡಿಪುಡಿ, ಸುಣ್ಣವನ್ನು ಇಡುತ್ತಿದ್ದರಂತೆ. ಒಟ್ಟು ಕುಟುಂಬ, ಒಟ್ಟಾಗಿ ಕುಳಿತು ತಾಂಬೂಲವನ್ನು ಹಾಕುವಾಗ ಈ ಕಾರು ಎಲ್ಲರಿಗೂ ಸಪ್ಲೈ ಮಾಡುತ್ತಿತ್ತಂತೆ. ಒಂದು ಅಪರೂಪದ ವಸ್ತು ನೋಡಿದ ಖುಶಿಯಾಯಿತು.

**–ಸುಮಾ ಕೆ.ಆರ್., ಶಿವಮೊಗ್ಗ**

